1	2	3	4
17)	ತೋವಿನಕೆರೆ	ತುಮಕೂರು	66 ಕೆ.ವಿ.
18)	ಗುಂಡ್ಲುಪೇಟೆ	ಮೈಸೂರು	66 ”
19)	ಸಂತೇ ಮಾರನಹಳ್ಳಿ	ಮೈಸೂರು	66 ”
20)	ದುದ್ದ	ಹಾಸನ	66 ”
21)	ಉದಯಪುರ	ಹಾಸನ	66 ”
22)	ಹೊರಕೆರ ದೇವರಪುರ	ಚಿತ್ರದುರ್ಗ	66 ”
23)	ಶೃಂಗೇರಿ	ಚಿಕ್ಕಮಗಳೂರು	33 ”
24)	ಮುರನಾಡು	ಕೊಡಗು	33 ”
25)	ಕಮಟಗಿ	ಬಿಜಾಪುರ	33 ”
26)	ಶೇಷಗಿರಿ	ಧಾರವಾಡ	33 ”
27)	ಜನವಾಡ	ಬೀದರ್	33 ”
28)	ಕೆಂಬಾವಿ	ಗುಲ್ಬರ್ಗಾ	33 ”
29)	ಹೆಬ್ರಿ	ದಕ್ಷಿಣ ಕನ್ನಡ	33 ”
30)	ಕೊಣ್ಣೂರು	ಬೆಳಗಾಂ	33 ”

ರಾಜ್ಯದಲ್ಲಿ ಪಡಿತರ ವಿತರಣೆಯಲ್ಲಿ ಕಡಿತ

2417 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದಲ್ಲಿನ ಪಡಿತರ ಚೀಟಿದಾರರಿಗೆ ದವಸಧಾನ್ಯಗಳ ವಿತರಣೆಯನ್ನು ಕಡಿತಗೊಳಿಸಲು ಕಾರಣಗಳೇನು?*
2. *ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಸರಬರಾಜು ಆಗುತ್ತಿರುವ ದವಸ ಧಾನ್ಯಗಳ ಪ್ರಮಾಣವೇನು?*
3. *ರಾಜ್ಯದಲ್ಲಿ ಪಡಿತರ ಚೀಟಿದಾರರಿಗೆ ಸೀಮೆಎಣ್ಣೆ ಸಮಪರ್ಕವಾಗಿ ವಿತರಣೆ ಯಾಗುತ್ತಿದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು?*
4. *ಪಡಿತರ ಚೀಟಿದಾರರಿಗೆ ಸಮರ್ಪಕವಾಗಿ ದವಸ ಧಾನ್ಯ ಮತ್ತು ಸೀಮೇಎಣ್ಣೆ ವಿತರಣೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

1. ಕಳೆದ ಹತ್ತು ವರ್ಷಗಳ ಆಹಾರಧಾನ್ಯಗಳ ಎತ್ತುವಳಿಯ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ಕೇಂದ್ರ ಸರ್ಕಾರವು ದಿನಾಂಕ 1-6-94 ರಿಂದ ರಾಜ್ಯಕ್ಕೆ ಹಿಂದೆ ಬಿಡುಗಡೆ ಮಾಡುತ್ತಿದ್ದ ಆಹಾರಧಾನ್ಯಗಳ ಪ್ರಮಾಣದಲ್ಲಿ ಶೇಕಡ 50ರಷ್ಟನ್ನು ಕಡಿಮೆ ಮಾಡಿರುತ್ತಾರೆ. ಹೀಗಾಗಿ ಬಡತನ ರೇಖೆಗಿಂತ ಮೇಲ್ಪಟ್ಟ ಕಾರ್ಡುದಾರರಿಗೆ ವಿತರಣಾ ಪ್ರಮಾಣದಲ್ಲಿ ಕಡಿಮೆಯಾಗಿರುತ್ತದೆ. ಆದರೆ ಬಡತನ ರೇಖೆಗಿಂತ ಕಡಿಮೆ ಇರುವ ಕುಟುಂಬಗಳಿಗೆ ಹಿಂದಿನಂತೆ ಕಾರ್ಡುಗೆ 10 ಕೆ.ಜಿ. ಯಂತೆ 60.78 ಲಕ್ಷ ಕುಟುಂಬಗಳಿಗೆ ರಿಯಾಯಿತಿ ದರದಲ್ಲಿ ಆಹಾರಧಾನ್ಯಗಳನ್ನು ವಿತರಿಸಲಾಗುತ್ತಿದೆ.

2. ದಿನಾಂಕ 1-6-97 ರಿಂದ ರಾಜ್ಯಕ್ಕೆ 75000 ಟನ್ ಆಹಾರಧಾನ್ಯಗಳನ್ನು ಕೇಂದ್ರ ಸರ್ಕಾರವು ಬಿಡುಗಡೆ ಮಾಡುತ್ತಿದೆ. ಇದಕ್ಕೆ ಮುನ್ನ ಇದು 1.52 ಲಕ್ಷ ಟನ್ ಆಗಿತ್ತು.

1.6.97 ರಿಂದ	*1.6.97ರ ಹಿಂದೆ*
60,000 ಮೆ.ಟನ್ ಅಕ್ಕಿ	1,22,000 ಮೆ.ಟನ್ ಅಕ್ಕಿ
15,000 ಮೆ.ಟನ್ ಗೋಧಿ	30,000 ಮೆ.ಟನ್ ಗೋಧಿ

3. ಹೌದು. ಸೀಮೆಎಣ್ಣೆಯನ್ನು ಸಮರ್ಪಕವಾಗಿ ವಿತರಣೆ ಮಾಡಲು ಪಟ್ಟಣ ಪ್ರದೇಶಗಳಲ್ಲಿ ಕೂಪನ್ ಪದ್ಧತಿಯನ್ನು ಗ್ರಾಮಾಂತರ ಪ್ರದೇಶದಲ್ಲಿ ಸ್ಥಳಕ್ಕೇ ಒಯ್ದು ವಿತರಣೆ ಮಾಡುವ ವ್ಯವಸ್ಥೆ ಮಾಡಲಾಗಿದೆ.

4. ಆಹಾರಧಾನ್ಯ ಮತ್ತು ಸೀಮೆಎಣ್ಣೆಯನ್ನು ಸಮರ್ಪಕವಾಗಿ ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಿಸಲು ಈ ಕೆಳಕಂಡ ವ್ಯವಸ್ಥೆಗಳನ್ನು ಮಾಡಲಾಗಿದೆ.

1. ಹಿಂದಿನ ತಿಂಗಳ ಕೊನೆಯಲ್ಲಿಯೇ ಕೇಂದ್ರ ಕಛೇರಿಯಿಂದ ಹಂಚಿಕೆಯನ್ನು ನೀಡಲಾಗುವುದು.
2. ಪ್ರತಿ ತಿಂಗಳು 3 ರಂದು ನ್ಯಾಯಬೆಲೆ ಅಂಗಡಿ ವರ್ತಕರ ಮತ್ತು ಆಹಾರ ನಿರೀಕ್ಷಕರ ಸಭೆಗಳನ್ನು ಕರೆದು ಅಂಗಡಿಗಳಲ್ಲಿರುವ ತಿಂಗಳ ಮುಕ್ತಾಯ ದಾಸ್ತಾನನ್ನು ಜಿಲ್ಲಾಧಿಕಾರಿಗಳಿಗೆ ನೀಡಲು ತಹಶೀಲ್ದಾರ್‌ರವರಿಗೆ ಸೂಚನೆಗಳನ್ನು ನೀಡಲಾಗಿದೆ.
3. ಪ್ರತಿ ತಿಂಗಳು 5ರ ಒಳಗಾಗಿ ಆಹಾರಧಾನ್ಯಗಳ ಹಂಚಿಕೆಯನ್ನು ತಾಲ್ಲೂಕಿನ ತಹಶೀಲ್ದಾರ್‌ಗಳಿಗೆ ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.
4. ಆ ತಿಂಗಳ ಹಂಚಿಕೆಯು ಬರುವುದರೊಳಗಾಗಿ ಶೇಕಡ 50ರಷ್ಟು ಆಹಾರ -ಧಾನ್ಯಗಳನ್ನು ಎತ್ತುವಳಿ ಮಾಡಲು ಸಗಟು ಮಳಿಗೆಯವರಿಗೆ ಅನುಮತಿ ನೀಡಲಾಗಿದೆ.
5. ನ್ಯಾಯಬೆಲೆ ಅಂಗಡಿದಾರರು ಪ್ರತಿ ತಿಂಗಳು ಆಹಾರ ಧಾನ್ಯಗಳನ್ನು ದಿನಾಂಕ 15ರ ಒಳಗೆ ಎತ್ತುವಳಿ ಮಾಡಲು ಸೂಚಿಸಿದೆ.

6. ಆಹಾರಧಾನ್ಯಗಳ ಸಾಗಾಣಿಕೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರಧಾನ್ಯಗಳ ಎತ್ತುವಳಿಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ.
7. ರೂಟ್ ಮ್ಯಾಪ್ಸ್‌ಗಳನ್ನು ತಯಾರಿಸಿದೆ. ಅದರಂತೆ ಆಹಾರ ನಿರೀಕ್ಷಕರು ವಾಹನಗಳ ಜೊತೆ ಹೋಗುತ್ತಿರುತ್ತಾರೆ.
8. ಕಾರ್ಯ ನಿರ್ವಾಹಕ ಸಿಬ್ಬಂದಿಗೆ ಇಂತಿಷ್ಟು ತಪಾಸಣೆಗಳನ್ನು ಮಾಡಲು ನಿಗಧಿಪಡಿಸಲಾಗಿದೆ.
9. ಜಿಲ್ಲಾಧಿಕಾರಿಗಳು ಮತ್ತು ತಹಸೀಲ್ದಾರುಗಳಿಗೆ ತಪಾಸಣೆ ಮಾಡಲು ಸೂಚಿಸಿದೆ.
10. ನ್ಯಾಯಬೆಲೆ ಅಂಗಡಿಗಳ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಆಹಾರಧಾನ್ಯಗಳ ವಿತರಣೆ ಮೇಲ್ವಿಚಾರಣೆ ನೋಡಿಕೊಳ್ಳಲು ವಿಚಕ್ಷಣಾ ಸಮಿತಿಗಳನ್ನು ರಚಿಸಲು ಸೂಚಿಸಿದೆ.

ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಗೆ ಬರುವ ಕೆ.ಎಲ್.ಇ. ಕಾಲೇಜಿಗೆ ಬಿ.ಡಿ.ಎ. ಯಿಂದ ನಿವೇಶನ

2420 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನವರಂಗ್ ಚಿತ್ರಮಂದಿರದ ಬಳ ಕೆ.ಎಲ್.ಇ. ಕಾಲೇಜಿಗೆ ನೀಡಲಾಗಿರುವ ಬಿ.ಡಿ.ಎ. ನಿವೇಶನದ ಅಳತೆ ಎಷ್ಟು?

ಆ) ನಿವೇಶನವನ್ನು ನೀಡಿರುವ ಉದ್ದೇಶ ಏನು?

ಇ) ಸದರಿ ಕಾಲೇಜಿನ ವ್ಯವಸ್ಥಾಪಕ ಮಂಡಳಿಯು ಈ ನಿವೇಶನದಲ್ಲಿ ಸುತ್ತಲೂ ಗೋಡೆಯನ್ನು ಕಟ್ಟಿರುವುದರಿಂದ ಈ ಬಡಾವಣೆಯ ಸಹಸ್ರಾರು ಯುವಕರು ಕ್ರೀಡಾಂಗಣದ ಉಪಯೋಗದಿಂದ ವಂಚನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ)

ಕ್ರಮ	ಬಡಾವಣೆ	ಸಿ.ಎ ನಿವೇಶನದ ಅಳತೆ	ವಿಸ್ತೀರ್ಣ
1)	ರಾಜಾಜಿನಗರ 2ನೇ ಬ್ಲಾಕ್	ಪೂರ್ವ ಪಶ್ಚಿಮಕ್ಕೆ $\frac{360 + 25}{2}$ ಉತ್ತರ ದಕ್ಷಿಣಕ್ಕೆ 450	86,625 ಚ.ಅ